ನೋಡಿದರೆ agriculture ನಲ್ಲಿ ಹೇಳಿಲ್ಲ. Horticulture ನಲ್ಲಿ ಹೇಳಿದ್ದಾರೆ. ಆದರೂ, ನಮ್ಮ ಇಲಾಖೆಯಿಂದ ನಮಗೂ 75% ಬೇಕೆಂಬ ನಿಟ್ಟಿನಲ್ಲಿ already ಉಪ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ. ಅದರ ಪರಿಶೀಲನೆಯನ್ನು ಅವರು ಮಾಡುತ್ತಿದ್ದಾರೆ. ಆದರೆ, ತಮ್ಮ ಉತ್ತರದಲ್ಲಿ ಅವರು ಇವತ್ತು ಸದನದಲ್ಲಿ ಒಪ್ಪಿಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಅದು ಬಹಳ ಸಂತೋಷ. ಇಡೀ ರಾಜ್ಯದ ರೈತರ ಪರವಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ರಾಜ್ಯ ಸರ್ಕಾರದ್ದು 86 ಲಕ್ಷ ರೂಪಾಯಿಗಳನ್ನು ನಾವು ನೀರಾವರಿಗೆ ಕೊಟ್ಟಿದ್ದೇವೆ. ಆದರೆ, ಕೇಂದ್ರ ಸರ್ಕಾರದಿಂದ ವಿಶೇಷವಾಗಿ ಈ ಯೋಜನೆಯಡಿಯಲ್ಲಿ ನಮಗೆ ಇನ್ನೂ ಹೆಚ್ಚಿನ ಹಣ ಬಂದಿದೆ. Already 16 ಕೋಟಿ ರೂಪಾಯಿಗಳ DD ಬಂದಿದೆ. 6 ಜಿಲ್ಲೆಗಳಿಗೆ 8 ಕೋಟಿ ರೂಪಾಯಿಗಳು ಬಂದಿದೆ. ಸುಮಾರು 24 ಕೋಟಿ 56 ಲಕ್ಷ ರೂಪಾಯಿಗಳು ಬಂದಿದೆ. ಇವತ್ತು ಉಪ ಮುಖ್ಯಮಂತ್ರಿಗಳೇನು ಒಪ್ಪಿಕೊಂಡಿದ್ದಾರೆ, ಇದು ನಮಗೆ ಬಹಳ ಪ್ರೋತ್ಸಾಹದಾಯಕವಾಗಿದೆ. State share 21 ಕೋಟಿ 49 ಲಕ್ಷ ರೂಪಾಯಿ ಏನಿದೆ, ಈಗ ಹೆಚ್ಚಿಗೆ ಹಣ ಕೊಡಬೇಕಾಗುತ್ತದೆ. ಅದಕ್ಕೆ ಬರುವ ದಿನಗಳಲ್ಲಿ ಇಡೀ ರಾಜ್ಯದ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಮತ್ತೊಂದು ಸಲ ನಾನು ಉಪ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಬಾಕಿ ಬಿಲ್ಲು ಪಾವತಿಸುವುದು

56(428) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಚಾಮರಾಜನಗರ ಜಿಲ್ಲೆಗೆ ಟಾಸ್ಕ್‌ಫೋರ್ಸ್ ಸಮಿತಿ ಮುಖಾಂತರ ಅನುಷ್ಠಾನಗೊಳಿಸಿರುವ ತುರ್ತು ಕುಡಿಯುವ ನೀರು ಯೋಜನೆಗೆ ಅನುದಾನ ಎಷ್ಟು ;

ಆ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ತಾಲ್ಲೂಕು ಹಾಗೂ ಕೊಳ್ಳೇಗಾಲಕ್ಕೆ ಬಿಡುಗಡೆಯಾಗಿರುವ ಅನುದಾನ ಎಷ್ಟು ;

ಇ) ಮುಕ್ತಾಯಗೊಂಡ ಕಾಮಗಾರಿಗಳಿಗೆ ಬಿಡುಗಡೆ ಮಾಡಬೇಕಾಗಿರುವ ಅನುದಾನ ಎಷ್ಟು ;

ಈ) ಕಳೆದ ಎರಡು ವರ್ಷಗಳಲ್ಲಿ ಬಾಕಿ ಉಳಿದ ಬಿಲ್ಲುಗಳನ್ನು ಪಾವತಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ;

ಉ) ಉಳಿದ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

ಊ) ಟಾಸ್ಕ್‌ಫೋರ್ಸ್ ವ್ಯಾಪ್ತಿಗೆ ಪಟ್ಟಣ ಪ್ರದೇಶಗಳನ್ನು ಸೇರಿಸಲಾಗುವುದೇ ;

ಋ) ಇಲ್ಲವಾದಲ್ಲಿ ಈ ಪ್ರದೇಶಗಳ ಕುಡಿಯುವ ನೀರಿನ ತೀವ್ರ ಸಮಸ್ಯೆಗೆ ತುರ್ತು ಪರಿಹಾರವೇನು ?

ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು :

ಅ) ಸರ್ಕಾರದಿಂದ ನೇರವಾಗಿ ಚಾಮರಾಜನಗರ ಜಿಲ್ಲೆಯ ಟಾಸ್ಕ್‌ಫೋರ್ಸ್ ಸಮಿತಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಬಾಬ್ತಿಗಾಗಿ ರೂ. 78.065 ಲಕ್ಷ 2006–07 ರ ಸಾಲಿಗೆ ಬಿಡುಗಡೆಯಾಗಿದೆ. ಇದಲ್ಲದೇ ಜಿ.ಪಂ. ರಾಜ್ಯ ಮತ್ತು ಕೇಂದ್ರ ವಲಯಗಳಡಿ ಟಾಸ್ಕ್‌ಫೋರ್ಸ್ ವತಿಯಿಂದ ಆವರಿಸಿದ CAP-99, Slipped Back, newly emerged Habitations ಸಲುವಾರಿ ರೂ. 59.62 ಲಕ್ಷ ಬಿಡುಗಡೆ ಮಾಡಿದೆ.

ಆ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ತಾಲ್ಲೂಕಿಗೆ ರೂ. 10.74 ಲಕ್ಷ ಹಾಗೂ ರೂ. 7.75 ಲಕ್ಷ ಕೊಳ್ಳೇಗಾಲ ತಾಲ್ಲೂಕಿಗೆ ಬಿಡುಗಡೆ ಮಾಡಿದೆ.

ಇ) ರೂ. 12.39 ಲಕ್ಷ.

ಈ) ಅನುಮೋದನೆಗೊಂಡು ಅನುಷ್ಠಾನಗೊಳಿಸಿರುವ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪ್ರಸಕ್ತ ಸಾಲಿನಲ್ಲಿ ಪಾವತಿಸಲಾಗುತ್ತಿದೆ.

ಉ) 2006–07ರ ಸಾಲಿನಲ್ಲಿ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಜಿ.ಪಂ. ಕ್ರಮವಹಿಸುತ್ತಿದೆ.

ಊ) ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ರಚಿಸಿರುವ ಟಾಸ್ಕ್‌ಫೋರ್ಸ್ ಸಮಿತಿ ವ್ಯಾಪ್ತಿಗೆ ಪಟ್ಟಣ ಪ್ರದೇಶ ಬರುವುದಿಲ್ಲ.

ಋ) ಆಯಾ ಜಿಲ್ಲಾಧಿಕಾರಿಗಳು ಪಟ್ಟಣ ಪ್ರದೇಶ ಸೇರಿದಂತೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ವಹಿಸುವರು.

ಶ್ರೀ ಎಸ್. ಬಾಲರಾಜ್: 2005–06ನೇ ಸಾಲಿಗೆ ಈಗಾಗಲೇ ಈ taskforce ಸಮಿತಿಗೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ, ನಿನ್ನೆ ಆ ವಿಚಾರ ಸದನದಲ್ಲಿ ಪ್ರಸ್ತಾಪವಾಗಿದೆ. ನಮ್ಮ ಹಣೆಬರಹ ಅಂದರೆ, ಹಣವಿಲ್ಲದ ಖಾತೆಗೆ ಸಚಿವರನ್ನು ಮಾಡಿದ ಹಾಗಾಗಿದೆ ನಮ್ಮ ಕತೆ. ಇದು ಬಹಳ ದುರಂತವೆಂದರೆ, 2005–06ನೇ ಸಾಲಿನ ಎರಡು ವರ್ಷಗಳೂ ಸೇರಿದಂತೆ ಸುಮಾರು 2 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ನಾವು ಅನುಮೋದನೆ ಪಡೆದಿದ್ದೇವೆ. ಇಷ್ಟಾದರೂ ಕೂಡ, ನನ್ನ ಕ್ಷೇತ್ರ ವ್ಯಾಪ್ತಿಗೆ ಸೇರಿರುವಂಥ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಿಗೆ ಇದುವರೆಗೆ ಬಿಡುಗಡೆಯಾಗಿರುವ ಹಣ 18 ಲಕ್ಷದ 49 ಸಾವಿರ ರೂಪಾಯಿಗಳು ಮಾತ್ರ. 12 ಲಕ್ಷದ 39 ಸಾವಿರ ರೂಪಾಯಿ ಬಾಕಿ bill ಗಳು ಎಂದಿದೆ. ಸುಮಾರು 2 ಕೋಟಿ ರೂಪಾಯಿಗಳಿಗೆ ತುರ್ತು ಕುಡಿಯುವ ನೀರಿಗೆ ಕಾಮಗಾರಿಯನ್ನು ಪ್ರಾರಂಭಿಸುವಂಥ ಕ್ರಿಯಾ ಯೋಜನೆಯನ್ನು ನಾವು ತಯಾರಿಸಿ ಇನ್ನೂ ಸುಮಾರು 1 ಕೋಟಿ 30 ಲಕ್ಷ ರೂಪಾಯಿಗಳ ಕಾಮಗಾರಿಗಳು ಏನೂ ಮಾಡುವುದಕ್ಕಾಗದೇ ಬಿಟ್ಟು ಹೋದವು. ಏಕೆಂದರೆ, ನಮಗೂ ಭಯವಾಯಿತು. ಹೇಳಿದಂಥ contractor ಗಳಿಗೆ 2 ವರ್ಷಗಳಾದರೂ bill ಕೊಟ್ಟಿಲ್ಲ. ಅದು ಬೇರೆ ಕಾಮಗಾರಿಗಳ ತರಹವೂ ಅಲ್ಲ. ಕುಡಿಯುವ ನೀರು ಎಂದರೆ, bore ಹೊಡೆಯಬೇಕು, pipeline ಹಾಕಬೇಕು, mini water supply ಗೆ ಸಂಬಂಧಿಸಿದ ಎಲ್ಲಾ ಸಾಮಾನುಗಳನ್ನೂ ಅವರು ಹಣ ಕೊಟ್ಟು ತಂದು ಕೆಲಸ ಮಾಡುವಂಥ ಕಾಮಗಾರಿಗಳು ಇಷ್ಟಾದರೂ ಕೂಡ, ಈ ಕುಡಿಯುವ ನೀರಿಗೆ ತುರ್ತಾಗಿ ಇದನ್ನು ಬಿಡುಗಡೆ ಮಾಡದಿದ್ದರೆ ಸರ್ಕಾರ ನಿಗದಿಪಡಿಸಿದ ಹಣವನ್ನು ಕೊಡದಿದ್ದರೆ, ನಾವು ಯಾವ ರೀತಿ ಈ ಸಮಸ್ಯೆಯನ್ನು ಪರಿಹರಿಸಿದಂತಾಗುತ್ತದೆ? ಕೇವಲ ಕುಡಿಯುವ ನೀರಿಗೆ ಇಂಥ ಸಮಸ್ಯೆ ಸೃಷ್ಟಿಯಾದರೆ, ಕ್ಷೇತ್ರದಲ್ಲಿ ನಾವು ಬೇರೆ ಕೆಲಸಗಳನ್ನು ಹೇಗೆ ಮಾಡುವುದಕ್ಕೆ ಸಾಧ್ಯ? ಇದಕ್ಕೇಕೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಗ್ರಾಮೀಣ ಪ್ರದೇಶಗಳಿಗೆ ಹೋದರೆ ಅವರು ಬೇರೆ ತಾಲ್ಲೂಕು, ಗ್ರಾಮ, ಜಿಲ್ಲಾ ಪಂಚಾಯತ್ ಸದಸ್ಯರಿಗೆ task force ಇದೆ, ಶಾಸಕರು ಅಧ್ಯಕ್ಷರಾಗಿದ್ದಾರೆ ಅವರ ಕೈಯಲ್ಲಿ ಮಾಡಿಸಿ ಎನ್ನುತ್ತಾರೆ. ಹೋದ ಕಡೆಯೆಲ್ಲ, ಕುಡಿಯುವ ನೀರಿಲ್ಲದೇ ಇರುವ ಕಡೆ ಗ್ರಾಮೀಣ ಪ್ರದೇಶದಲ್ಲಿ ನಮ್ಮನ್ನು ಕೆಟ್ಟದಾಗಿ

ನಡೆಸಿಕೊಳ್ಳುತ್ತಾರೆ. ಇದನ್ನು ಪರಿಹರಿಸುವ ದೃಷ್ಟಿಯಲ್ಲಿ ನೀವೇನು ತೀರ್ಮಾನ ತೆಗೆದುಕೊಂಡಿದ್ದೀರಿ? ಮಾಡಬೇಕಾದಂಥ ಕೆಲಸವೇನಿದೆ, ಅದಕ್ಕೆ ತುರ್ತಾಗಿ ಬಿಡುಗಡೆ ಮಾಡುತ್ತೀರೋ, ಇಲ್ಲವೋ? ಎಂದು ಹೇಳಬೇಕೆಂದು ನಾನು ತಮ್ಮ ಮೂಲಕ ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್: ರಾಜ್ಯದಲ್ಲಿ task force ಕೆಲಸಗಳಿಗೆ 124.39 ಕೋಟಿ ರೂಪಾಯಿ ಬೇಡಿಕೆ ಇದೆ. ಇಲ್ಲಿಯತನಕ 32 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಮತ್ತು slipped back ಹಾಗೂ cap 99 ಗ್ರಾಮಗಳಿಗೆ regular ಆಗಿ ಮಂಜೂರಾತಿ ಕೊಟ್ಟಿರತಕ್ಕಂಥ ಹಣವನ್ನು ಬಿಡುಗಡೆ ಮಾಡಲು ಆದೇಶ ಕೊಟ್ಟಿದ್ದೇವೆ. ಅದನ್ನು adjust ಮಾಡುವುದನ್ನು ಮಾಡುತ್ತಾರೆ. ಉಳಿದಂಥ ಹಣವನ್ನು ಮತ್ತೆ ಸರ್ಕಾರದಿಂದ ತೆಗೆದುಕೊಂಡು ಬಿಡುಗಡೆ ಮಾಡುವ ಕೆಲಸ ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್: ಈಗಾಗಲೇ ಏನು ಕ್ರಿಯಾ ಯೋಜನೆ ಮಾಡಿದ್ದೇವೆ, ಆ ಕ್ರಿಯಾ ಯೋಜನೆಯಲ್ಲಿರತಕ್ಕಂಥ ಕಾರ್ಯಕ್ರಮವನ್ನು ನಾವು ಮತ್ತೆ ತೆಗೆದುಕೊಳ್ಳಬಹುದೆ? ಅಥವಾ ಆ ಗ್ರಾಮದ ಪ್ರದೇಶಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಹಾಗೇ ಉಳಿಸುವುದೇ? ಇದಕ್ಕೆ ದಯವಿಟ್ಟು ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಎಸ್.ಎ. ರವೀಂದ್ರನಾಥ್: ಪರಿಶೀಲನೆ ಮಾಡಿ ಹೇಳುತ್ತೇನೆ.

ಅಧ್ಯಕ್ಷರು: ಶಕುಂತಲಾ ಶೆಟ್ಟಿಯವರು ಪ್ರಶ್ನೆ ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: (ಗೊಂದಲ) ಅವರು ನಿರ್ದಿಷ್ಟವಾಗಿ ಕೇಳಿದ್ದಾರೆ. ಹಿಂದಿನ ಕಾಮಗಾರಿಗಳನ್ನು ತೆಗೆದುಕೊಳ್ಳುವುದೇ ? ಅಥವಾ ನೀರು ಕೊಡದೇ ಇರುವುದೇ? ಎಂದು ನಿರ್ದಿಷ್ಟವಾಗಿ ಕೇಳಿದರೆ ನೀವು ಪರಿಶೀಲನೆ ಮಾಡುತ್ತೇನೆಂದರೆ ನೀರು ಕೊಡುತ್ತೀರೋ, ಇಲ್ಲವೋ ಎಂದು ಪರಿಶೀಲನೆ ಮಾಡಬೇಕೆ ?

ಶ್ರೀ ಎಸ್.ಎ.ರವೀಂದ್ರನಾಥ್: ಈ ವರ್ಷ ನೀರು ಸರಬರಾಜು ಅವಶ್ಯಕತೆಗೆ ಕೇಂದ್ರ ಸರ್ಕಾರದಿಂದ 116 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ಅದು ಬಂದ ಕೂಡಲೇ ಉಳಿದ ಹಣ ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀಮತಿ ಎಂ.ಕೆ. ನಾಗಮಣಿ: ಈ ಸಮಸ್ಯೆ ಎಲ್ಲ ಕಡೆಯೂ ಇದೆ. ಈಗಾಗಲೇ ಕಾಮಗಾರಿಗಳು ಪೂರ್ತಿಯಾಗಿ ಯಾರಿಗೂ ಹಣ ಬಂದಿಲ್ಲ. ನಾವೆಲ್ಲ ತಪ್ಪಿಸಿಕೊಂಡು ಓಡಾಡಬೇಕು. ಮಾಡಿದಂಥ ಕೆಲಸ ಕಾರ್ಯಗಳಿಗೂ ಹಣ ಕೊಟ್ಟಿಲ್ಲ. ಅವರು ಹಣ ಕೇಳಿ ನಮ್ಮ ಮನೆ ಹತ್ತಿರ ಬಂದು ನಮಗೆ ಸಾಲ ಕೊಟ್ಟಿರುವವರ ತರಹ ಬಂದು ನಿಲ್ಲುತ್ತಿದ್ದಾರೆ. ಸಂಬಂಧಪಟ್ಟಂಥ ಅಧಿಕಾರಿಗಳ ಗಮನಕ್ಕೆ ತೆಗೆದುಕೊಂಡು ಬಂದರೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ, ನಾವೇನು ಮಾಡೋಣವೆಂದು CE ರವರು ನಮಗೆ ಉತ್ತರ ಕೊಡುತ್ತಾರೆ. ಆದ್ದರಿಂದ,ದಯವಿಟ್ಟು, ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಕೊಟ್ಟು ಎಲ್ಲೆಲ್ಲಿ ಕೊನೆ ಪಕ್ಷ ಕಾಮಗಾರಿಗಳು ಪೂರ್ತಿಯಾಗಿವೆಯೋ ಆ ಕೆಲಸ ಮಾಡಿದವರಿಗೆ ಹಣ ಬಿಡುಗಡೆ ಮಾಡಿಕೊಟ್ಟರೆ ನಾವು at least ಕ್ಷೇತ್ರದಲ್ಲಿ ನೆಮ್ಮದಿಯಾಗಿಯಾದರೂ ಓಡಾಡಬಹುದು.

ಶ್ರೀ ಬಿ.ಆರ್. ಪಾಟೀಲ್: ಕಳೆದ ವರ್ಷದ ಅನುಭವದಿಂದ ಈ ವರ್ಷ ಹೆದರಿ ನಾವು ಕ್ರಿಯಾ ಯೋಜನೆಯನ್ನು ಮಾಡಲಿಲ್ಲ. (ಗೊಂದಲ)

ಅಧ್ಯಕ್ಷರು: ಪ್ರಶ್ನೆ ಕೇಳುವುದಕ್ಕೆ ಶ್ರೀಮತಿ ಶಕುಂತಲಾ ಶೆಟ್ಟಿಯವರನ್ನು ಕರೆದಿದ್ದೇನೆ. ಈಗ ಹಳೆಯ ಕತೆಯೇ ಆರಂಭವಾದರೆ.... ಹೀಗಾದರೆ, ಏನು ಮಾಡುವುದೆಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಆರ್. ಪಾಟೀಲ್: ತಾವು ಏಕೆ ಸಾರ್ ಕೋಪ ಮಾಡಿಕೊಳ್ಳುತ್ತೀರಿ?

ಅಧ್ಯಕ್ಷರು: ನಾನು ಪ್ರಶ್ನೆಯನ್ನು close ಮಾಡಿದ್ದೇನೆ. ನಾನು ಅವರನ್ನು ಕರೆದಿದ್ದೇನೆ. ಹೀಗೆ ಹೇಳಿದರೂ ಎಲ್ಲರೂ ಕೇಳಿದರೆ ಏನಿದು? ಶಕುಂತಲಾ ಶೆಟ್ಟಿಯವರೆ, ನೀವು ನಿಮ್ಮ ಪ್ರಶ್ನೆ ಕೇಳಿ.

ಬಿತ್ತನೆ ಬಿಜಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸುವುದು

57(441) **ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು)** : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಕೃಷಿ ಇಲಾಖೆಯ ವತಿಯಿಂದ ದ್ವಿದಳ ಧಾನ್ಯಗಳ ಬಿತ್ತನೆ ಬೀಜ ಸರಿಯಾದ ಸಮಯಕ್ಕೆ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;